**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

**C.C..No.** 224/2019

ಸಾಕ್ಷಿದಾರರ ಹೆಸರುಃ ಅಮೃತ ಪ್ರಸಾದ್ ರೈ

ತಂದೆಯ ಹೆಸರುಃ ಸೀತಾರಾಮ ರೈ

ವಯಸ್ಸುಃ 56 ವರ್ಷ

ಉದ್ಯೋಗಃ ಕೃಷಿ

ವಾಸಸ್ಥಳಃ ಬೆಟ್ಟಂಪಾಡಿ

ದಿನಾಂಕ 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನಕರಿಂದಃ**

ನನಗೆ ಚಾ.ಸಾ.1 ರವರ ಪರಿಚಯ ಇಲ್ಲ. ಅವರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಅಂಗಡಿಯಲ್ಲಿ ಕಳ್ಳತನವಾಗಿದ್ದನ್ನು ಕೇಳಿ ತಿಳಿದಿದ್ದೇನೆ. ಯಾವ ವಸ್ತು ಕಳವಾಗಿತ್ತು ಎಂದು ಗೊತ್ತಿಲ್ಲ. ಸಾಕ್ಷಿಗೆ ಒಂದು ಮಹಜರು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು ಸದರಿ ದಾಖಲೆಯನ್ನು ನಿ.ಪಿ.19 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು.

ನಿ.ಪಿ.19 ಕ್ಕೆ ಕೊರೋನಾ ಗಿಂತ ಮೊದಲು ಸಂಪ್ಯ ಪೊಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಆರೋಪಿಯನ್ನು ದಸ್ತಗಿರಿ ಮಾಡಿ ಯಾವುದೇ ಸ್ವತ್ತನ್ನು ಪೊಲೀಸರು ತಮ್ಮ ವಶ ಪಡೆದಿಲ್ಲ. ನಿ.ಪಿ.19 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ.

ಸಾಕ್ಷಿಯ ನಿ.ಪಿ.18 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು ನಿ.ಪಿ.18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.18(ಬಿ) ಎಂದು ಗುರುತಿಸಲಾಯಿತು. ನಿ.ಪಿ.18 ಕ್ಕೆ ಸಹಿಯನ್ನು ಕೊರೋನಾಗಿಂತ ಮೊದಲು ಸಂಪ್ಯ ಪೊಲೀಸು ಠಾಣೆಯಲ್ಲಿ ಮಾಡಿದ್ದೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಥಳ ಮಹಜರು ಮಾಡಿಲ್ಲ. ನಿ.ಪಿ18 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. 1 ರಿಂದ 4ನೇ ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನಿ.ಪಿ.7 ರಲ್ಲಿ ಗುರುತಿಸಿರುವ ಬಾವಚಿತ್ರಗಳನ್ನು ತೋರಿಸಿದ್ದು ಸಾಕ್ಷಿ ಆ ಬಾವಚಿತ್ರಗಳನ್ನು ತಾನು ಇರುವುದನ್ನು ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ.1 ರವರಿಗೆ ಸೇರಿದ ಆಲರ್ಪದವಿನಲ್ಲಿರುವ ಅಂಗಡಿಯಿಂದ ಕಾಳುಮೆಣಸು ಕಳ್ಳತನವಾಗಿತ್ತು ಎಂದರೆ ಕೇಳಿ ಗೊತ್ತಿದೆ ಎಂದು ನುಡಿಯುತ್ತಾರೆ. ದಿನಾಂಕ 13-10-2017 ರಂದು ನನ್ನನ್ನು ಮತ್ತು ಚಾ.ಸಾ.10 ರವರನ್ನು ಪುತ್ತೂರು ಗ್ರಾಮಾಂತರ ಪೊಲೀಸರು ಆರ್ಯಾಪು ಗ್ರಾಮದ ಕುಂಜೂರುಪಂಜ ಎಂಬಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಇನೋವಾ ಕಾರು ಮತ್ತು ಬೊಲೋರೋ ಜೀಪನ್ನು ನಿಲ್ಲಿಸಿ ಪರಿಶೀಲಿಸಿದಾಗ, ಇನೋವಾ ಕಾರಿನಲ್ಲಿ 1 ಮತ್ತು 4ನೇ ಆರೋಪಿಗಳು ಇದ್ದು ಅದರ ಹಿಂದೆ 8 ಗೋಣಿ ಚೀಲಗಳು ಇದ್ದು 50 ಕೆ.ಜಿ ತೂಕದ ಕಾಳು ಮೆಣಸು ಇತ್ತು ಹಾಗೂ ಬೊಲೋರೋ ಜೀಪಿನಲ್ಲಿ 2 ಮತ್ತು 3ನೇ ಆರೋಪಿತರು ಇದ್ದು ಆ ಜೀಪಿನಲ್ಲಿ 7 ಗೋಣಿ ಚೀಲಗಳು ಇದ್ದು ತಲಾ 50 ಕೆ.ಜಿಯಂತೆ ಕಾಳು ಮೆಣಸುಗಳು ಇತ್ತು, ಅದಕ್ಕೆ ಎ.ಕೆ.ಪಿ. ಎನ್ನುವ ಗುರುತು ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸ್ಥಳಕ್ಕೆ ಚಾ.ಸಾ.1 ರವರು ಬಂದು ತಮ್ಮ ಅಂಗಡಿಯಲ್ಲಿ ಕಳ್ಳತನ ವಾಗಿದ್ದು ಕಾಳುಮೆಣಸನ್ನು ಗುರುತಿಸಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಪೊಲೀಸರು ಬೆಳಿಗ್ಗೆ 10.30-12.00 ಗಂಟೆಯ ವರೆಗೆ ನನ್ನ ಮತ್ತು ಚಾ.ಸಾ.10 ರವರ ಸಮಕ್ಷಮ ನಿ.ಪಿ.19 ರಂತೆ ಮಹಜರು ಬರವಣಿಗೆ ಮಾಡಿದ್ದು ಆರೋಪಿಗಳನ್ನು ಹಾಗೂ ಸ್ವತ್ತುಗಳನ್ನು ತಮ್ಮ ವಶಪಡೆದರು ಎಂದರೆ ಸರಿಯಲ್ಲ. ಆಗ ನಾನು ನಿ.ಪಿ.19 ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

ಅದೇ ದಿನ ಮಧ್ಯಾಹ್ನ 03.00-03.45 ರ ಸಮಯದಲ್ಲಿ 1ನೇ ಆರೋಪಿಯು ತೋರಿಸಿಕೊಟ್ಟ ಕಳ್ಳತನ ವಾಗಿದ್ದ ಸ್ಥಳದಲ್ಲಿ ಪೊಲೀಸರು ನನ್ನ ಹಾಗೂ ಚಾ.ಸಾ.10 ರವರ ಸಮಕ್ಷಮ ನಿ.ಪಿ.18 ರಂತೆ ಸ್ಥಳ ಮಹಜರನ್ನು ತಯಾರಿಸಿ ಸ್ಥಳದಲ್ಲಿಯೇ ನನ್ನ ಸಹಿಯನ್ನು ಪಡೆದರು ಎಂದರೆ ಸುಳ್ಳು. ಈ ಬಗ್ಗೆ ನಾನು ದಿನಾಂಕ 13-10-2018 ರಂದು ನನಗೆ ಓದಿ ಹೇಳಿದಂತೆ " ನಾನು ಹೇಳಿದ ವಿಳಾಸದಲ್ಲಿ - --------------------------- ---------------------- -------- ನಾನು ಸಹಿ ಹಾಕಿರುತ್ತೇನೆ ''ಎಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೆನು ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.20 ಎಂದು

ಗುರುತಿಸಲಾಯಿತು. ಆರೋಪಿಗಳನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಏನು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.